**ಓ.ಎಸ್. ನಂಃ 19/2015**
**ಡಿ.ಡಬ್ಲ್ಯೂಃ1, ಶರಬಣ್ಣಾ**

ದಿನಾಂಕ :04-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ಜಿ. ಎನ್. ಜೆ. ವಕೀಲರಿಂದ

ವಾದಿಯರು ನನ್ನ ವಿರುದ್ಧ ಯಾವ ಕಾರಣಕ್ಕೆ ದಾವೆ ಹಾಕಿದ್ದಾರೆಂದು ನನಗೆ ಗೊತ್ತಿರುತ್ತದೆ. ಆಸ್ತಿಯಲ್ಲಿ ಪಾಲು ಕೇಳಿ ದಾವೆ ಹಾಕಿರುತ್ತಾರೆ. 1 ನೇ ವಾದಿಯು ಈ ದಾವೆ ಹಾಕಿದಾಗ ಅಲ್ಪ ವಯಿ ಇದ್ದಾಗ ಜೀವನಾಂಶ ಕೋರಿ ಮಧ್ಯಂತರ ಅರ್ಜಿ ಸಲ್ಲಿಸಿದ್ದರು ಅಂದರೆ ಸರಿ. ಈಗ 1 ನೇ ವಾದಿಯು ವಯಸ್ಕರಾಗಿದ್ದಾರೆ ಅಂದರೆ ಸರಿ. ಅವರು ಎಲ್ಲಿ, ಏನು ಓದುತ್ತಿದ್ದಾರೆಂದು ನನಗೆ ಮಾಹಿತಿ ಇಲ್ಲಾ. ದಾವೆ ಹಾಕಿದ ನಂತರ ನಾನು ಅವರನ್ನು ಅವರ ಕ್ಷೇಮ ಕುಶಲದ ಬಗ್ಗೆ ವಿಚಾರಿಸಿದ್ದೆ ಉಳಿದ ವಿಚಾರಗಳನ್ನು ಕೇಳಿಲ್ಲಾ ಅದರ ಅವಶ್ಯಕತೆ ಬಂದಿಲ್ಲಾ. ನಾನು ಅವರನ್ನು ವಿಚಾರಿಸಿಲ್ಲಾ ಮತ್ತು ಅವರ ಶಿಕ್ಷಣದ ಬಗ್ಗೆ ನಾನು ಮಾಡಬೇಕಾದ ಕರ್ತವ್ಯ ಮಾಡಿಲ್ಲಾ ಎಂದರೆ ಸಾಕ್ಷಿ ಅವರು ಜೀವಾನಂಶ ಕೇಳಿದ್ದರು ಆ ಬಗ್ಗೆ ನಾನು ಹಣ ಕೊಡುತ್ತಿದ್ದೇನೆ ಎಂದು ಹೇಳುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರಿಗೆ ಜೀವಾನಂಶ ಕೊಟ್ಟಿದ್ದಿರಾ ಎಂದು ಕೇಳಿದ್ಕೆಕ ಸಾಕ್ಷಿ ಈ ಕೇಸಿನಲ್ಲಿ ಕೇಳಿಲ್ಲಾ ಕೊಟ್ಟಿಲ್ಲಾ ಎಂದು ಹೇಳುತ್ತಾರೆ.

ಸನ್ನತಿಯಲ್ಲಿ ನಮ್ಮದು ಕೃಷಿ ಆಧಾರಿತ ಕುಟುಂಬ ಎಂದರೆ ಸರಿ. ನನ್ನ ತಂದೆಯವರು ಆಗಿನ ಕಾಲದಲ್ಲಿ ಒಳ್ಳೆಯ ಮನೆತನ ವ್ಯಕ್ತಿಗಳು ಎಂದು ಹೇಳುತ್ತಾರೆ . 2 ನೇ ವಾದಿ ಅಕ್ಕಮ್ಮ ಇವರು ನನ್ನ 2 ನೇ ಮಗ ಕವಿರಾಜ ಇವರ ಹೆಂಡತಿ. ನಾನು ಮತ್ತು ನನ್ನ ಸಹೋದರರಾದ 4 ಮತ್ತು 5 ನೇ ಪ್ರತಿವಾದಿಗಳು ಪಾಲು ವಿಬಾಗ ಮಾಡಿಕೊಂಡ ನಂತರ ನಮ್ಮ ನಮ್ಮ ಹಿಸ್ಸೆ ಯಲ್ಲಿ ನಾವು ಕಬ್ಜೆಯಲ್ಲಿ ಇದ್ದೇವು ಎಂದು ಹೇಳುವುದು ಸರಿ. ನನ್ನ ಹೆಂಡತಿ ಹೆಸರು ಸರೋಜಾ. ನನಗೆ ರವಿರಾಜ, ಶೋಭಾ ಮತ್ತು ಕವಿರಾಜ 3 ಜನ ಮಕ್ಕಳು. ಕವಿರಾಜ ಇವರು 18-7-2013 ರಂದು ತೀರಿಕೊಂಡಿರುತ್ತಾರೆ. 2 ನೇ ವಾದಿ ಅವರ ಹೆಂಡತಿ ಮತ್ತು 1 ನೇ ವಾದಿ ಕವಿರಾಜ ಇವರ ಮಗಳು ಎಂದರೆ ಸರಿ.

ಮುಂದುವರೆದ ಪಾಟಿ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**